ಸಮೀಪದ ಹಳ್ಳಿಯೊಂದರ ವರನಿಗೆ ಮದುವೆ ಮಾಡಿಕೊಟ್ಟರು. ಅವನು ಪಕ್ಕದ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದ, ಅದೂ ತಂತ್ರಜ್ಞಾನ ಕಂಪನಿಯಲ್ಲಿ. ಮತ್ತೊಮ್ಮೆ ಅಪ್ಪಯ್ಯನ ನಿರೀಕ್ಷೆಗಳು ಹುಸಿಯಾದವು. ಅಳಿಯನನ್ನು ಅವನು ಕೆಲಸ ಮಾಡುತ್ತಿದ್ದ ಕಂಪನಿಯೇ ವಿದೇಶಕ್ಕೆ ಕಳಿಸಿತು. ಅಳಿಯನೊಂದಿಗೆ ಮಗಳೂ ವಿದೇಶಕ್ಕೆ ಹಾರಿದಳು'.

ಇದು ಅಪ್ಪಯ್ಯನ ಸಂಕ್ಷಿಪ್ತ ಕಥೆ ಎಂದು ವಿವರಿಸಿದಳು ಶಾರ್ವರಿ.

* * *

ಇಷ್ಟು ಕೇಳಿದ ಮೇಲೆ ಆತಿಥೇಯನೊಂದಿಗೆ ಮೂರು ದಿನಗಳ ಕಾಲ ಹರಟೆ ಕೊಚ್ಚಿದ್ದ ವಿಶ್ವನಾಥಯ್ಯನಿಗೆ ವಿಷಯ ಇವಳು ಹೇಳುವಷ್ಟು ಸರಳವಿಲ್ಲ ಎನ್ನಿಸಿತೋ ಏನೋ 'ಹಾಗಾದರೆ ನೀನು ಯಾರ ಮಗಳು' ಎಂದು ಕೇಳಿದರು.

'ನಾನು ಇವರ ಮಕ್ಕಳ ಮಗಳೇನೂ ಅಲ್ಲ. ಅಪ್ಪಯ್ಯನಿಗೆ ಒಂದು ತೋಟವಿದೆ. ಅಲ್ಲಿ ನನ್ನ ತಂದೆ- ತಾಯಿ ಕೆಲಸ ಮಾಡುತ್ತಿದ್ದಾರೆ. ಅವರ ಮಗಳು ನಾನು. ನನ್ನನ್ನು ಚಿಕ್ಕವಳು ಇದ್ದಾಗಿನಿಂದಲೇ ತಮ್ಮಲ್ಲಿಗೆ ಕರೆ ತಂದು ಸಾಕಿದರು. ಅಲ್ಲಿಂದ ಇಲ್ಲಿಯವರೆಗೆ ನನ್ನ ಓದು- ಬರಹ, ಊಟ- ತಿಂಡಿ, ಉಡುಗೆ- ತೊಡುಗೆ ಎಲ್ಲವನ್ನೂ ಅಪ್ಪಯ್ಯನೇ ನೋಡಿಕೊಳ್ಳುತ್ತಿದ್ದಾರೆ. ಅವರ ಸಹಾಯದಿಂದಾಗಿ ನಾನು ಸದ್ಯ ಇದೇ ಊರಿನಲ್ಲಿ ಎಂಜಿನಿಯರಿಂಗ್ ಶಿಕ್ಷಣ ಓದುತ್ತಿದ್ದೇನೆ. ಉನ್ನತ ಶಿಕ್ಷಣದಿಂದಾಗಿಯೇ ಅವರ ಮಕ್ಕಳೆಲ್ಲ ವಿದೇಶಕ್ಕೆ ಹೋಗಿದ್ದರೂ ನನಗೆ ಇಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಸಿಕ್ಕಿದಾಗ ಅಪ್ಪಯ್ಯ ಬೇಡವೆನ್ನಲಿಲ್ಲ. ಓದು ಮಗಳೇ ಎಂದು ಹುರಿದುಂಬಿಸಿದರು. ಆದರೆ ಒಂದು ಷರತ್ತು, ಓದು ಮುಗಿದ ನಂತರ ಇಲ್ಲಿಯೇ ಇರಬೇಕು, ನಿನ್ನವರನ್ನು ನೋಡಿಕೊಳ್ಳಬೇಕು. ಇದರ ಹೊರತಾಗಿ ನಾನು ಏನನ್ನೂ ನಿನಗೆ ಹೇಳಲಾರೆ' ಎಂದರು.

* * *

'ಹಾಗಾದರೆ ನಿಮ್ಮ ಅಜ್ಜಿ, ಅಂದರೆ ಅಪ್ಪಯ್ಯ ಅವರ ಹೆಂಡತಿ?'

'ಇಲ್ಲ, ಅವರು ತೀರಿಕೊಂಡು ಏಳೆಂಟು ವರ್ಷವಾಯಿತು. ಆಗಿನಿಂದ ಅಪ್ಪಯ್ಯ ಎಲ್ಲದಕ್ಕೂ ನನ್ನ ಮೇಲೆಯೇ ಅವಲಂಬಿತರಾಗಿದ್ದಾರೆ' ಎಂದು ಚುಟುಕಾಗಿ ಉತ್ತರಿಸಿದಳು.

ಆಗ ವಿಶ್ವನಾಥಯ್ಯ 'ಏನಾಗಿತ್ತು ಅವರಿಗೆ? ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು ಎನ್ನಿಸುತ್ತದೆ' ಎಂದು ಪ್ರಶ್ನೆ ಹಾಕಿದರು.

'ಹೌದು, ಅವರಿಗೆ ಸಾಯುವ ವಯಸ್ಸೇನೂ ಆಗಿರಲಿಲ್ಲ. ತೀರಿಕೊಂಡಾಗ 57- 58 ವರ್ಷ ಇದ್ದಿರಬೇಕು. ಅದೂ ಒಂದು ಕಥೆ. ಅವರು ತೀರಿಕೊಳ್ಳುವ ವರ್ಷವೇ ಕೊನೆಯ ಮಗ ಮತ್ತು ಮಗಳು ವಿದೇಶಕ್ಕೆ ಹೋಗಿದ್ದು. ಇಬ್ಬರು ಮಕ್ಕಳು ವಿದೇಶಕ್ಕೆ ಹೋದರೇನಾಯಿತು. ಇನ್ನಿಬ್ಬರು ದೇಶದಲ್ಲಿಯೇ ಇದ್ದಾರಲ್ಲ ಎಂದು ಒಬ್ಬರಿಗೊಬ್ಬರು ಆಗಾಗ ಸಮಾಧಾನ ಮಾಡಿಕೊಳ್ಳುತ್ತಿದ್ದರು. ಯಾವಾಗ ಇಲ್ಲಿದ್ದ ಇಬ್ಬರೂ ಮಕ್ಕಳು ವಿದೇಶಕ್ಕೆ ಹೊರಟರೋ ಆಗ ಅಪ್ಪಯ್ಯನ ಆರೋಗ್ಯದಲ್ಲಿ ಏರುಪೇರಾಯಿತು. ಅಪ್ಪಯ್ಯ ಎಲ್ಲಿ ಸಾಯುತ್ತಾರೋ ಎಂಬ ಭಯ ನಮ್ಮಲ್ಲಿ ಮನೆ ಮಾಡಿತ್ತು. ಆದರೆ ಅಮ್ಮನಲ್ಲಿ ಯಾವೊಂದು ಅಳುಕೂ ಇರಲಿಲ್ಲ. ಅವರು ಅಪ್ಪಯ್ಯನ ಶುಶ್ರೂಷೆಯನ್ನು ಎಷ್ಟು ಚೆನ್ನಾಗಿ ನೋಡಿಕೊಂಡರೆಂದರೆ ಅವರನ್ನು ನೋಡಿಕೊಳ್ಳುವ ನೆಪದಲ್ಲಿ ತಮ್ಮ ಆರೋಗ್ಯದತ್ತ ಗಮನ ಹರಿಸಲಿಲ್ಲ. ಹೋಗಬೇಕಾಗಿದ್ದ ಅಪ್ಪಯ್ಯ ಉಳಿದುಕೊಂಡರು, ಗಟ್ಟಿಮುಟ್ಟಾಗಿದ್ದ ಅಮ್ಮ ಹಠಾತ್ತನೆ ಹೋಗಿಬಿಟ್ಟರು'.

* * *

'ಅಮ್ಮ ಹೋದ ನಂತರ ಕೆಲವು ದಿನ ಅಪ್ಪಯ್ಯ ಮೌನಕ್ಕೆ ಜಾರಿದರು. ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಯಾವಾಗಲೂ ಏಕಾಂತದಲ್ಲಿರಲು ಬಯಸುತ್ತಿದ್ದರು. ಇದಕ್ಕೆ ಕಾರಣವೂ ಇತ್ತು. ಅಮ್ಮ ಹೋದಾಗ ಮಕ್ಕಳೆಲ್ಲರಿಗೆ ವಿಷಯ ತಿಳಿಸಿದರು. ನಾವು ಬರಬೇಕೆಂದರೆ ಒಂದೆರಡು ದಿನ ಕಾಯಬೇಕಾಗುತ್ತದೆ. ಕಾಯುವಿರಾ ಎಂದು ಪ್ರಶ್ನಿಸಿದರು. ಆಯಿತು ಕಾಯುತ್ತೇವೆ ಎಂದು ಅಪ್ಪಯ್ಯ ಹೇಳಿದರು. ಅಮ್ಮನ ಶರೀರವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿನ ಶವಾಗಾರದಲ್ಲಿ ಕಾಯ್ದಿಡಲಾಯಿತು. ಆದರೆ ಮರುದಿನದ ವೇಳೆಗೆ ಒಬ್ಬೊಬ್ಬರಿಂದ ಒಂದೊಂದು ಉತ್ತರ